

ಪ್ರೀತಿ ಮತ್ತು ಅಚ್ಚರಿ. ಹೊಸ ಯುವಕ–ಯುವತಿಯರನ್ನು ಬರಹ ಮತ್ತು ಚಳವಳಿಗಳಲ್ಲಿ ತೊಡಗಿಸುವುದು ಅವರ ಇನ್ನೊಂದು ಆಸಕ್ತಿ. ಅವರು ಚಳವಳಿಯ ಅಂಗಳಕ್ಕೆ ತಂದ ಹಲವು ತರುಣರು ಮುಂದೆ ರಾಜ್ಯಮಟ್ಟದ ನಾಯಕರಾಗಿ ಬೆಳೆದರು. ದಲಿತ ಸಂಘರ್ಷ ಸಮಿತಿಯನ್ನು ಮುನ್ನಡೆಸಿದರು. ಚೆನ್ನಣ್ಣ ಚಳವಳಿಗಳಲ್ಲಿ ಹಾಡಲು ಬೇಕಾದ ಹಾಡುಗಳನ್ನು ರಚಿಸಿದರು. ತಾವೇ ಧಾಟಿ ಹಾಕಿ ಹಾಡುತ್ತಿದ್ದರು. ಹಾಗೆಯೇ ಬಂಡಾಯ ಸಂಘಟನೆ ರೂಪುಗೊಳ್ಳುವಲ್ಲಿ ಅವರದು ಪ್ರಮುಖ ಪಾತ್ರ. ಧರ್ಮಸ್ಥಳದ ಸಮ್ಮೇಳನದಲ್ಲಿ ದಲಿತಗೋಷ್ಠಿ ಏರ್ಪಡಿಸಬೇಕೆಂದು ಬರೆದ ಪತ್ರ ಹಲವು ತಿರುವು ಪಡೆದುಕೊಂಡು ಪ್ರತಿಭಟನೆ ಮತ್ತು ಹೊಸ ಆಲೋಚನೆಗಳಿಗೆ ಕಾರಣವಾಯಿತು. ಹೀಗೆ ತಲೆಯಲ್ಲಿ ನೂರೆಂಟು ಕೆಲಸ ಹಾಕಿಕೊಂಡು ಅವರು ದಣಿಯುತ್ತಿದ್ದ ರೀತಿಯನ್ನು ನಾನು ಹತ್ತಿರದಿಂದ ಕಂಡಿರುವೆ.

ಚಳವಳಿಗಳಿಗೆ ಅವರು ತ್ರಾಣ ತುಂಬಿದಂತೆ, ಚಳವಳಿಯಿಂದ ತಾವೂ ಕೂಡ ತ್ರಾಣ ಪಡೆದಿದ್ದರು. ಎಲ್ಲಿಯೇ ಆಗಲಿ ಒಂದು ಪ್ರಗತಿಪರ, ಮೌಢ್ಯವಿರೋಧಿ ಚಳವಳಿ ನಡೆಯುತ್ತಿದೆಯೆಂದು ಗೊತ್ತಾದರೆ ಸಾಕು ಅಲ್ಲಿಗೆ ಹಾಜರು. ಬಾಬಾಸಾಹೇಬರ ಕುರಿತು ಬರೆದ ಹಾಡುಗಳನ್ನು ಹಾಡುತ್ತಿದ್ದರು. ಇದಕ್ಕಾಗಿ ಯಾರಾದರೂ ತಮ್ಮನ್ನು ಕರೆಯಲಿ ಎಂದು ನಿರೀಕ್ಷಿಸಲಿಲ್ಲ. ಇದೆಲ್ಲವೂ ತಮ್ಮ ಕರ್ತವ್ಯವೆಂಬುದು ಅವರ ಭಾವನೆಯಾಗಿತ್ತು. ಕಲಬುರ್ಗಿ, ರಾಯಚೂರು,